

# ಕೋತಿ ಮೂತಿ ಅಲ್ಲ.. ಆರ್ಕಿಡ್!





ಮಂಗನ ಮುಖದ ಆರ್ಕಿಡ್‌ಗಳು ಕೀಟಲೆ ಮಾಡುವ ಮಂಗನಂತಿವೆ. ವೈಜ್ಞಾನಿಕವಾಗಿ ಡ್ರ್ಯಾಕುಲಾ ಸಿಮಿಯಾ, ಆರ್ಕಿಸ್ ಸಿಮಿಯಾ ಎಂದು ಕರೆಯುವರು. ಲ್ಯಾಟಿನ್ ಭಾಷೆಯಲ್ಲಿ ಸಿಮಿಯಾ ಅಂದರೆ ಮಂಗ ಎಂದರ್ಥ. ಹೂವಿನ ದಳಗಳು ಮಂಗನ ಮುಖದ ಆಕಾರವನ್ನೂ, ಕೇಸರಗಳು ಮೂಗಿನಂತೆಯೂ ಕಾಣುತ್ತವೆ. ಹೂಗಳು ವಿವಿಧ ವರ್ಣಗಳಲ್ಲಿ ಕಂಡುಬರುತ್ತವೆ. ಈ ಹೂಗಳು ಪೂರ್ಣ ಅರಳಿದಾಗ ಕಿತ್ತಳೆಯ ಸುವಾಸನೆ ಬೀರುತ್ತವೆ. ಹೂಗಳು ಅರಳಲು ಯಾವುದೇ ನಿರ್ದಿಷ್ಟ ಋತುಮಾನವಿಲ್ಲ. ಯಾವ ಕಾಲದಲ್ಲಾದರೂ ಅರಳುತ್ತವೆ. ಪೆರು ಮತ್ತು ಆಗ್ನೇಯ ಈಕ್ವೆಡಾರ್ ಪರ್ವತ ಪ್ರದೇಶದಲ್ಲಿ ಸಮುದ್ರ ಮಟ್ಟದಿಂದ 1000 ದಿಂದ 2000 ಮೀ. ಎತ್ತರದಲ್ಲಿ ಕಂಡುಬರುತ್ತವೆ.

ಜಗತ್ತಿನ ತುಂಬ ಆರ್ಕಿಡ್ ಪ್ರಬೇಧಗಳು ಹರಡಿಕೊಂಡಿವೆ. ಆದರೂ ಉಷ್ಣವಲಯ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಾಗಿವೆ. ಒಂದು ಅಂದಾಜಿನ ಮೇರೆಗೆ ಜಗತ್ತಿನಲ್ಲಿ 35,000ಕ್ಕಿಂತ ಹೆಚ್ಚಿನ ಆರ್ಕಿಡ್ ಪ್ರಬೇಧಗಳಿವೆ ಎನ್ನಲಾಗಿದೆ. ಭಾರತದ ಕರಾವಳಿಯುದ್ದಕ್ಕೂ ಈಶಾನ್ಯದಲ್ಲೂ ಹಲವಾರು ಪ್ರಬೇಧಗಳಿವೆ.

ಆರ್ಕಿಡ್‌ಗಳು ಸುಂದರವಾದ, ಸುವಾಸನಾಯುಕ್ತವಾದ, ದುಬಾರಿಯಾದ ಹೂಗಳೆಂದು ನಂಬಲಾಗಿದೆ. ಆದರೆ ಅನೇಕ ಆರ್ಕಿಡ್‌ಗಳಿಗೆ ದುರ್ವಾಸನೆಯಿದೆ. ಆರ್ಕಿಡ್‌ಗಳಿಗೆ ಬೇರೆ ಬೇರೆ ಆಕಾರ, ಗಾತ್ರ, ಬಣ್ಣಗಳಿವೆ. ಆರ್ಕಿಡ್‌ಗಳು ನೆಲದ ಮೇಲಿನಕ್ಕಿಂತ ಮರದ ಮೇಲೆ ಪರೋಪಜೀವಿಗಳಂತೆ ಬೆಳೆಯುತ್ತವೆ.

■ ಪ್ರಕಾಶ. ಎಸ್. ಮನ್ನಂಗಿ